ಶ್ರೀ ಹಾರ್ನಹಳ್ಳಿ ರಾಮಸ್ವಾಮಿ. —ಮಾನ್ಯ ಅಧ್ಯಕ್ಷರೇ, ಸುಭಾಷ್‌ಜೋಶಿಯವರನ್ನು ಈ ಅಧಿವೇಶನ ಮುಗಿಯುವವರೆಗೆ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸದಂತೆ ತೀರ್ಮಾನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು. —ಈ ಪ್ರಸ್ತಾವನೆಯನ್ನು ಸದನದ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು.

(ಪೋಲೀಸರು ಶ್ರೀ ಸುಭಾಷ್‌ಜೋಷಿಯವರನ್ನು ಎತ್ತಿ ಸದನದಿಂದ ಹೊರಹಾಕಿದರು)

ಅಧ್ಯಕ್ಷರು. —ಈಗ ವಿತ್ತೀಯ ಕಾರ್ಯಕಲಾಪಗಳು. ೧೯೬೪–೬೫ರ ಆಯವ್ಯಯ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ.

† ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಯವರು). —ಮಾನ್ಯ ಸಭಾಧ್ಯಕ್ಷರೇ, ನನಗೆ ಕುಳಿತು ಉತ್ತರ ಕೊಡಲಿಕ್ಕೆ ದಯವಿಟ್ಟು ಅನುಮತಿ ಕೊಡಬೇಕೆಂದು ಪ್ರಾರ್ಥನೆ. ಅಧ್ಯಕ್ಷರೇ, ೧೯೬೪–೬೫ರ ಆಯವ್ಯಯವನ್ನು ಮಂಡಿಸಿದ ಮೇಲೆ ಈ ಸದನದಲ್ಲಿ ಸಾಕಷ್ಟು ಚರ್ಚೆ ಆಗಬೇಕಾಗಿತ್ತು. ಸುಮಾರು ೮ ಮಂದಿ ಸನ್ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಆಯವ್ಯಯವನ್ನು ಮಂಡನೆ ಮಾಡಿದ ಮೇಲೆ ಸದನದ ಹೊರಗಡೆ ಕೂಡ ಸಾಕಷ್ಟು ಪ್ರತಿಕ್ರಿಯೆಗಳು ಬಂದಿವೆ. ಈ ಟೀಕೆಗಳಲ್ಲಿ ಇದು ಚುನಾವಣೆಗೆ ಅನುಗುಣವಾಗಿ ಮಾಡಿದಂತಹ ಆಯವ್ಯಯ ಎಂಬುದು ಮತ್ತು ಸ್ವಾಗತವನ್ನು ಮಾಡಿದ ವಿಚಾರಗಳೂ ಬಂದಿವೆ. ನಾನು ಅನೇಕ ಬಾರಿ ಸದನದಲ್ಲಿ ಮತ್ತು ಹೊರಗಡೆ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಯಾವುದೇ ಒಂದು ರಾಜಕೀಯ ಪಕ್ಷ ಅಧಿಕಾರಕ್ಕೆ ಬರುವ ಮೊದಲು ತನ್ನದೇ ಆದ ಚುನಾವಣಾ ಪ್ರಣಾಳಿಕೆಯನ್ನು ಮುಂದೆ ಇಡುತ್ತದೆ. ೧೯೬೭ರಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬರುವ ಮೊದಲು ಒಂದು ಚುನಾವಣಾ ಪ್ರಣಾಳಿಕೆ ಇಟ್ಟಿವು. ಅದು ಇವತ್ತು ಜನತೆಯ ಮುಂದಿದೆ. ಮುಂದೆ ಬರುವ ಚುನಾವಣೆಗಳಲ್ಲಿ ನಮ್ಮ ಸಾಧನೆ ಸ್ಥಿತಿಗತಿಗಳನ್ನು, ಪ್ರಣಾಳಿಕೆಯಲ್ಲಿ ತೋರಿಸಿದ ಆಶ್ವಾಸನೆಗಳನ್ನು ಎಷ್ಟರಮಟ್ಟಿಗೆ ನಾವು ಅನುಷ್ಠಾನ ಮಾಡಿದ್ದೇವೆಂಬುದನ್ನು ಅನುಸರಿಸಿ ಜನತೆ ಮುಂದೆ ನಮಗೆ ಬೆಂಬಲ ಕೊಡಬಹುದು. ನಾವು ಅನುಷ್ಠಾನ ಮಾಡುವುದಕ್ಕೆ ಅಸಮರ್ಥರಾಗಿದ್ದರೆ ಮುಂದೆ ಬೆಂಬಲ ನೀಡದೇ ಇರಬಹುದು. ಆದ್ದರಿಂದ ೧೯೬೭ರಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಿದೆ. ಇದು ಜನತೆಯ ಸರ್ಕಾರ. ಆಡಳಿತಕ್ಕೆ ಬಂದ ಮೇಲೆ ಯಾವ ವರ್ಷ ಏನು ಮಾಡಿದ್ದೇವೆ ಎಂಬುದು ಮುಖ್ಯವಲ್ಲ. ಒಟ್ಟು ಐದು ವರ್ಷಗಳಲ್ಲಿ ನಾವು ಏನು ಸಾಧನೆ ಮಾಡಿದ್ದೇವೆ ಎನ್ನುವುದು ಮುಖ್ಯ. ನಾನು ಮುಖ್ಯ ಮಂತ್ರಿಯಾಗಿ ಏನು ಮಾಡಿದ್ದೇನೆ ಅದು ಮುಖ್ಯವಲ್ಲ ಅಥವಾ ಇನ್ನೊಬ್ಬರು ಸಾಧನೆ ಮಾಡಿಲ್ಲ ಎನ್ನುವುದು ಮುಖ್ಯವಲ್ಲ. ನಮ್ಮ ಕಾಂಗ್ರೆಸ್ ಸರ್ಕಾರದ ಒಟ್ಟು ಸಾಧನೆಯು ರೂಪುರೇಷೆಯನ್ನು ಜನತೆಯ ಮುಂದಿಟ್ಟರೆ ಇದರ ಪಾಲು ನಮ್ಮಲ್ಲಿ ಶಾಸಕರಿಗೂ ಪಕ್ಷಾತೀತವಾಗಿ ಎಲ್ಲಾ ಸದಸ್ಯರಿಗೂ ಸೇರುತ್ತದೆ. ಮುಖ್ಯವಾಗಿ ಚುನಾವಣಾ ಪ್ರಣಾಳಿಕೆಯನ್ನು ಕೊಟ್ಟಂತಹ ಕಾಂಗ್ರೆಸ್ ಶಾಸಕಾಂಗಕ್ಕೆ ಈ ಜವಾಬ್ದಾರಿ ಸ್ವಲ್ಪ ಹೆಚ್ಚಿದೆ. ನಾವು ಒಂದು ವರ್ಷ ಹೆಚ್ಚು ಸಾಧನೆ ಮಾಡಬಹುದು. ಒಂದು ವರ್ಷ ಸಾಧನೆ ಕಡಿಮೆ ಮಾಡಬಹುದು. ಆದರೆ ಒಟ್ಟು ನಮ್ಮ ಸಾಧನೆಯ ಸ್ಪಷ್ಟ ಸ್ವರೂಪವನ್ನು ಚುನಾವಣೆಯನ್ನು ಎದುರಿಸುವಾಗ ನಾವು ಜನತೆಯ ಮುಂದೆ ಇಡಬೇಕಾಗುತ್ತದೆ. ನಮ್ಮ ಅಕೌಂಟಬಿಲಿಟಿ ಜನತೆಗಿರುತ್ತದೆ. ಆದರ ಮೇಲೆ ಅವರು ತೀರ್ಪು ಮಾಡುತ್ತಾರೆ. ನಮ್ಮ ನಾಲ್ಕು ವರ್ಷಗಳಲ್ಲಿ ಏನು ಸಾಧನೆ ಮಾಡಲಿಕ್ಕಾಯಿತು ಎಂಬ ಒಟ್ಟು ಚಿತ್ರ ಬ್ಯಾಲೆನ್ಸ್ ಶೀಟ್ ಅನ್ನು ನಾನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದ್ದೇನೆ. ಎಲ್ಲೆ ನಾವು ಸಾಧನೆ ಮಾಡುವುದಕ್ಕೆ ಆಗಲಿಲ್ಲ ಅದನ್ನು ಕೂಡ ಪರಿಶೀಲನೆ ಮಾಡಿ ಸಾಕಷ್ಟು ಸಮಾಲೋಚನೆ, ಆತ್ಮಾವಲೋಕನ ಮಾಡಿ ಆ ಬ್ಯಾಲೆನ್ಸ್ ಶೀಟಿನಲ್ಲಿ ಕೊರತೆ ಇದ್ದುದನ್ನು ೧೯೬೪–೬೫ರಲ್ಲಿ ಟೈಂ ಬೌಂಡ್ ಪ್ರೋಗ್ರಾಂ ಹಾಕಿಕೊಂಡು ನಾನು ಮಾಡಬೇಕೆಂದು ಒಂದು ರೀತಿಯ ರಾಜಕೀಯ ಇಚ್ಛಾಶಕ್ತಿಯಿಂದ ಪ್ರೇರಿತನಾಗಿ ಇದನ್ನು ಸಾಧನೆ ಮಾಡಬೇಕೆಂದು ಜನತೆಗೆ ಕೊಟ್ಟ ಆಶ್ವಾಸನೆಯನ್ನು ಪೂರ್ತಿಮಾಡಬೇಕೆಂದು ಮುಂದೆ ಹೊರಟಾಗ ಅದು ರಾಜಕೀಯ, ಚುನಾವಣೆ ದೃಷ್ಟಿಯಿಟ್ಟುಕೊಂಡು ಅಂತಹ ಆಯವ್ಯಯ ಮುಂದೆ ಇಟ್ಟಿದ್ದೇವೆಂದು ಯಾರಾದರೂ ಹೇಳಿದರೆ ಅದು ರಾಜಕೀಯವಾಗಿ ಅಪ್ರಸ್ತುತ ವಾಗುತ್ತದೆ, ಆರ್ಥಿಕವಾಗಿ ಅಪ್ರಸ್ತುತವಾಗುತ್ತದೆ. ಪ್ರಜಾಪ್ರಭುತ್ವದ ಪದ್ಧತಿ ಅನುಸರಿಸಬೇಕಾದ ಯಾವುದೇ ಪಕ್ಷ, ಸರ್ಕಾರದ ದೃಷ್ಟಿಯಿಂದ ಇಂತಹ ಪ್ರಶ್ನೆ, ಆಪಾದನೆಗಳು ಖಂಡಿತವಾಗಿ ಅಪ್ರಸ್ತುತ

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.